ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ತಮ್ಮ ಮುಂದಾಂತರ ಈ ಸದನದಲ್ಲಿ ಪ್ರಶ್ನೆ ಕೇಳಿದಾಗ ಇದು ನಮ್ಮ ಕಕ್ಷೆಯಲ್ಲಿ ಬರುವುದಿಲ್ಲ, ಜಿಲ್ಲಾ ಪರಿಷತ್ತಿನಲ್ಲಿ ಕೇಳಬೇಕೆಂದು ಸಚಿವರು ಹೇಳಿದ್ದುಂಟು. ಆದಕ್ಕೋಸ್ಕರ ತಮ್ಮ ಮೂಲಕ ಕೇಳುತ್ತೇನೆ, ಸರ್ಕಾರಕ್ಕೆ ಅಧಿಕಾರ ಇರುವಾಗ ಅದನ್ನು ತಡೆಹಿಡಿಯಬೇಕಾಗುತ್ತದೆ. ಈ ರೀತಿ ತಪ್ಪು ಮಾಹಿತಿ ಕೊಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಸದಸ್ಯರೂ ಕೂಡ ಜಿಲ್ಲಾ ಪರಿಷತ್ತಿನ ಸದಸ್ಯರಾಗಿರುವುದರಿಂದ ಈ ಮಾಹಿತಿಯನ್ನು ಅಲ್ಲಿ ಪಡೆಯುವುದಕ್ಕೆ ಸಾಧ್ಯತೆ ಇದೆ. ಕಾನೂನು ವ್ಯವಸ್ಥೆಯಲ್ಲಿ ಜಿಲ್ಲಾ ಪರಿಷತ್ತಿನ ಪಾತ್ರ ಇರುವುದರಿಂದ ಕಾನೂನಿಗನುಗುಣವಾಗಿ ಕೆಲಸ ಮಾಡುತ್ತಾರೆ. ಅದರಲ್ಲಿ ಸರ್ಕಾರ ನೇರವಾಗಿ ಹಸ್ತಕ್ಷೇಪ ಮಾಡುವುದಕ್ಕೆ ಸಾಧ್ಯವಿಲ್ಲ. ದುರ್ವ್ಯವಹಾರವೇನಾದರೂ ಆಗುವುದು ಇದ್ದರೆ ನಿಯಮದ ಪ್ರಕಾರ ತಡೆಯಾಜ್ಞೆಯನ್ನು ಕೊಡಬೇಕಾಗುತ್ತದೆ. ಒಂದೇ ರಸ್ತೆಯಲ್ಲಿ ಒಂದೇ ಕೆಲಸಕ್ಕೆ ೩ ಬಾರಿ ಆಡಳಿತಾತ್ಮಕ ಮಂಜೂರಾತಿ ಪಡೆದು ಕೆಲಸ ಪುನರಪಿ ಆಗಿದ್ದರೆ ಕ್ರಮ ಕೈಗೊಳ್ಳುತ್ತೇನೆಂಬ ಭರವಸೆ ನೀಡುತ್ತೇನೆ.

29ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೋತ್ತರಗಳು

ಬೆಂಗಳೂರು ನಗರದಲ್ಲಿ ವರ್ತುಲ ರೈಲು ಮಾರ್ಗ

೧೧೩೦. ಶ್ರೀ ಆರ್. ಮೊಕಟಾಜಮ್ಮು (ಮುಳಬಾಗಿಲು).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿ ಎಷ್ಟು ಬಸ್ಸು, ಲಾರಿ, ದ್ವಿಚಕ್ರ ವಾಹನಗಳು, ಟೆಂಪೊ, ಆಟೋರಿಕ್ಷಾ ಮತ್ತು ಇತರ ವಾಹನಗಳು ಹೆಚ್ಚುತ್ತಿರುವ ಸಂಚಾರದಿಂದ ಸಂಚಾರ ಒತ್ತಡ ಉಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ವಾಹನ ಸಂಚಾರದ ಒತ್ತಡವನ್ನು ತಡೆಗಟ್ಟಲು ವರ್ತುಲ ರೈಲು ಮಾರ್ಗವನ್ನು ನಿರ್ಮಿಸುವ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ ?

ಇ) ಹಾಗಿದ್ದಲ್ಲಿ ಈ ಯೋಜನೆಯನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು ?

ಈ) ಬೆಂಗಳೂರು ನಗರದಲ್ಲಿ ಮೇಲು ಸೇತುವೆಗಳನ್ನು ಮತ್ತು ಸುರಂಗ ಮಾರ್ಗಗಳನ್ನು ಎಲ್ಲೆಲ್ಲಿ ನಿರ್ಮಿಸಿ ಸಂಚಾರ ಒತ್ತಡವನ್ನು ತಡೆಯುವ ಯೋಜನೆ ಇದೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಗಮನಕ್ಕೆ ಬಂದಿದೆ.

ಆ) ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಈ) ೧. ಮಹಾನಗರ ಪಾಲಿಕೆಯ ಕಛೇರಿಯ ಮುಂಭಾಗದಲ್ಲಿ ನರಸಿಂಹರಾಜ ರಸ್ತೆ ಮತ್ತು ನೃಪತುಂಗ ರಸ್ತೆಯನ್ನು ಸಂಪರ್ಕಿಸಲು ಭೂ ಗರ್ಭ ರಸ್ತೆಯನ್ನು ನಿರ್ಮಾಣ ಮಾಡುವುದು.

೨. ತನಂದರಾವ್ ವೃತ್ತದಲ್ಲಿ ಫ್ಲೈ ಓವರ್ ನಿರ್ಮಿಸುವುದು.

೩. ಭೂಗರ್ಭ ದಾರಿಗಳು ಮತ್ತು ಅಂಗಡಿಗಳು :

ಅ) ಗುಬ್ಬಿ ತೋಟದಪ್ಪ ರಸ್ತೆ, ಸಿಟಿ ರೈಲ್ವೆ ನಿಲ್ದಾಣದ ಮುಂಭಾಗದಲ್ಲಿ.

ಆ) ಮೈಸೂರು ಬ್ಯಾಂಕ್ ವೃತ್ತ.

ಇ) ಕೆಂಪೇಗೌಡ ವೃತ್ತ.

ಶ್ರೀ ಆರ್. ವೆಂಕಟರಾಮಯ್ಯ.— ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಟ್ರಾಫಿಕ್ ವಿಪರೀತ ಜಾಸ್ತಿಯಾಗಿದೆ. ಮಾನ್ಯ ಮಂತ್ರಿಗಳು ಕೆಂಪೇಗೌಡ ವೃತ್ತ, ಮಲ್ಲೇಶ್ವರ ವೃತ್ತ, ರಿಚ್‌ಮಂಡ್ ವೃತ್ತ ಆನಂದರಾವ್ ವೃತ್ತ, ಟ್ರಿನಿಟಿ ವೃತ್ತ ಮತ್ತು ಮೈಸೂರು ಬ್ಯಾಂಕ್ ವೃತ್ತ ಇಲ್ಲಿ ಫ್ಲೈ ಓವರ್ ಕಟ್ಟುವುದಕ್ಕೆ ಒಪ್ಪಿಕೊಳ್ಳುತ್ತಾರೆಯೆ ? ಜೊತೆಗೆ ಮಂಗಳೂರು ಜಾಗದಲ್ಲಿ ಮಾತ್ರ ಅಂಡರ್ ಗ್ರೌಂಡ್ ಮಾಡುತ್ತೇವೆಂದು ಹೇಳಿದ್ದಾರೆ. ಗುಬ್ಬಿ ತೋಟದಪ್ಪ ರಸ್ತೆ, ಮೈಸೂರು ಬ್ಯಾಂಕ್ ವೃತ್ತ ಮತ್ತು ಕೆಂಪೇಗೌಡ ವೃತ್ತ ಇಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಇದು ಕಡಿಮೆ ಅಲ್ಲವೆ ? ಮಾಧವರಾವ್ ರಿಪೋರ್ಟ್ ಒಪ್ಪಿಕೊಂಡಿದ್ದಾರೆ, ಅದರಲ್ಲಿ ವರ್ತುಲ ರೈಲ್ವೆ ಬಗ್ಗೆ, ರಿಂಗ್ ರೋಡ್ ಬಗ್ಗೆ ಹೇಳಿದ್ದಾರೆ. ಆ ಬಗ್ಗೆ ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ? ಎನ್. ಲಕ್ಷ್ಮಣರಾವ್ ರಿಪೋರ್ಟ್ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಎಂ. ಚಂದ್ರಶೇಖರ್.— ಬೆಂಗಳೂರಿನ ನಗರದ ಸಾರಿಗೆ ವ್ಯವಸ್ಥೆ ಈಗ ಹೆಚ್ಚಾಗಿರುವುದನ್ನು ಪರಿಗಣನೆಗೆ ತೆಗೆದುಕೊಂಡು ೨೦೦೧ನೇ ಇಸವಿಗೆ ಬೆಂಗಳೂರು ನಗರದ ವಾಹನ ಒತ್ತಡ ಏನಾಗಬಹುದು ಎಂದು ತಿಳಿದುಕೊಂಡು ರೈಲು ಹಾಗೂ ಬಸ್ ಎರಡೂ ವಾಹನಗಳು ಓಡಾಡುವಂಥ ಸಮಗ್ರವಾದ ಯೋಜನೆ ಪರಿಶೀಲನೆಯಲ್ಲಿದೆ. ಅದು ೪೦೦ ಕೋಟಿ ರೂಪಾಯಿಗಳ ಯೋಜನೆ. ಹಣ ಸಂಪನ್ಮೂಲ ನಮ್ಮ ರಾಜ್ಯ ಸರ್ಕಾರದಿಂದ ಮತ್ತು ಕಾರ್ಪೊರೇಷನ್‌ನಿಂದ ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ವರ್ಲ್ಡ್ ಬ್ಯಾಂಕ್ ಅಥವಾ ಬೇರೆ ಮೂಲಗಳಿಂದ ಸಂಪನ್ಮೂಲದ ಸಹಾಯ ಪಡೆಯಬೇಕಾಗುತ್ತದೆ. ಆದ್ದರಿಂದ ಸಮಗ್ರವಾಗಿ ಪರಿಶೀಲನೆ ಮಾಡಿ ಒಂದು ಅಂದಾಜು ಯೋಜನೆಯನ್ನು ಮಾಡಿಕೊಡಿ ಎಂಬ ರೈಟ್ಸ್ ಎಂಬ ಸಂಸ್ಥೆಗೆ ಮೂರು ತಿಂಗಳ ಹಿಂದೆ ಹೇಳಿದ್ದೇವೆ. ಆ ವರದಿ ಬಂದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದರಲ್ಲಿ ನೀವು ಹೇಳಿದ ಹಾಗೆ ವರ್ತುಲ ರೈಲು ವ್ಯವಸ್ಥೆಯೂ ಇದೆ. ಅನೇಕ ಕಡೆ ಫ್ಲೈ ಓವರ್ಸ್ ಮಾಡುವುದು, ಒಂದು ಕಡೆ ಅಂಡರ್‌ಗ್ರೌಂಡ್ ಮೆಟ್ರೋ ಟ್ರೈನ್ ವ್ಯವಸ್ಥೆ ಕೂಡ ಇದೆ. ಹೀಗೆಲ್ಲಾ ಅನೇಕ ಕಾಮಗಾರಿಗಳ ಬಗ್ಗೆ ಯೋಜನೆ ಮಾಡಿದ್ದೇವೆ. ಇದು ನಮ್ಮ ಚಿಂತನೆಯಲ್ಲಿದೆ. ೨೦೦೧ನೇ ಇಸವಿಗೆ ಬೆಂಗಳೂರು ನಗರದ ಜನಸಂಖ್ಯೆ ೭೨ ಲಕ್ಷ ಆಗ ಬಹುದೆಂದು ಅಂದಾಜು ಮಾಡಿ ಈ ಬಗ್ಗೆ ಸಮಗ್ರವಾದ ಯೋಜನೆಯನ್ನು ತಯಾರು ಮಾಡಿಕೊಡಿ ಎಂದು ಹೇಳಿದ್ದೇವೆ, ಅದು ಬಂದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಅದರಲ್ಲಿ ತಾವು ಹೇಳಿದ ಪ್ರದೇಶವೂ ಒಳಗೊಳ್ಳುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.— ದಿವಾನ್ ಮಾಧವರಾವ್ ಅವರು ಒಂದು ರಿಪೋರ್ಟ್ ಕೊಟ್ಟರು. ಅವರ ಮಕ್ಕಳಾದ ಲಕ್ಷ್ಮಣರಾವ್ ಅವರು ಒಂದು ರಿಪೋರ್ಟ್ ಕೊಟ್ಟರು. ತಾವು ಹೇಳಿದ ಅಂಶಗಳು ಮಾಧವರಾವ್ ರಿಪೋರ್ಟಿನಲ್ಲಿದೆ. ಅವರು ಯಾವುದನ್ನೂ ಬಿಟ್ಟಿಲ್ಲ. ಅವರು ವರದಿ ಕೊಟ್ಟು ೧೫ ವರ್ಷಗಳಾಯಿತು. ಇಲ್ಲಿಯವರೆಗೂ ಅದರ ಬಗ್ಗೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ? ಮೆಟ್ರೋ ಟ್ರೈನ್ ಹಾಕುತ್ತೇವೆಂದು ಹೇಳಿದ್ದಾರೆ. ಅದು ಎಷ್ಟು ಏರಿಯಾವರೆಗೂ ಹೋಗಂತ್ತದೆ ಎಂಬುದನ್ನು ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್.— ಆ ವರದಿಗಳೆಲ್ಲಾ ಬಂದರೂ ಹಣದ ವ್ಯವಸ್ಥೆ ನೋಡಿ ಸದ್ಯದಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ತೊಂದರೆಯಾಗುತ್ತದೆ ಎಂಬ ಕಾರಣದಿಂದ ಅದರ ಬಗ್ಗೆ ಹೆಚ್ಚು ಗಮನ ಹರಿಸಲಿಲ್ಲ ಎಂಬುದು ನಿಜ. ಈಗ ಸಮಸ್ಯೆ ಕುಳಿತಿರುವುದಕ್ಕೆ ಆಗುವುದಿಲ್ಲ. ಹತ್ತು ಹದಿನೈದು ವರ್ಷಗಳಲ್ಲಿ ಜನ ಸಂಖ್ಯೆ ಪ್ರಮಾಣ ಬೆಂಗಳೂರು ನಗರದಲ್ಲಿ ಬೆಳೆದ ಹಾಗೆ ರಾಷ್ಟ್ರದಲ್ಲಿ ಬೇರೆಲ್ಲೂ ಬೆಳೆದಿಲ್ಲ. ೨೦೦೧ಕ್ಕೆ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ತೀವ್ರವಾಗಿ ಪರಿಶೀಲನೆ ಮಾಡಿ ಈ ಕ್ರಮ ತೆಗೆದುಕೊಂಡಿದ್ದೇವೆ. ಮೆಟ್ರೋ ಟ್ರೈನ್ ಮಾಡುವ ಸೂಚನೆ ಇದೆ. ಅದು ಜಯನಗರದಿಂದ ರಾಜಾಜಿನಗರಕ್ಕೆ ವಿಧಾನಸೌಧದ ಮೂಲಕ ಹಾದು ಹೋಗುವಂತೆ ಯೋಜನೆ ಆದರಲ್ಲಿ ಇದೆ. ಅಂಡರ್‌ಗ್ರೌಂಡ್ ಎಲ್ಲೆಲ್ಲಿ ಮಾಡಬಹುದು, ಭೂಮಿ ಮೇಲೆ ಎಲ್ಲೆಲ್ಲಿ ಮಾಡಬಹುದು ಎಂಬ ಬಗ್ಗೆ ಸಮಗ್ರವಾಗಿ ಮಾಹಿತಿ ಪಡೆದು ಅವರು ವರದಿ ಕೊಡುವವರಿದ್ದಾರೆ. ಅದನ್ನು ನೋಡಿ ಕೊಂಡು ಮುಂದೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.— ವಿಧಾನಸೌಧದಿಂದ ಬೆಂಗಳೂರು ಸೆಂಟ್ರಲ್ ರೈಲ್ವೇ ಸ್ಟೇಷನ್‌ವರೆಗೆ ಒಂದು ಯೋಜನೆ ಇತ್ತು. ಅದನ್ನು ಏನು ಮಾಡಿದ್ದೀರಿ ? ವಿಧಾನಸೌಧ ಕಟ್ಟಿದಾಗಲೇ ಆ ಪ್ಲಾನ್ ಇತ್ತು ಎಂದು ಯಾರೋ ಹೇಳಿದರು. ಅದರ ಬಗ್ಗೆ ಏನು ಮಾಡುತ್ತೀರಿ ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್.— ಇದೆಲ್ಲಾ ಅದರೊಳಗೆ ಸೇರುತ್ತದೆ. ಎಲ್ಲವನ್ನೂ ಅವರಿಗೆ ಕೊಟ್ಟುಬಿಟ್ಟಿದ್ದೇವೆ. ಎಲ್ಲವನ್ನೂ ಅಧ್ಯಯನ ಮಾಡಿ ವರದಿ ಕೊಡಿ ಎಂದು ತಿಳಿಸಿದ್ದೇವೆ.

ಹೊಸದುರ್ಗ ತಾಲ್ಲೂಕಿನಲ್ಲಿ ಕೋಕನಟ್ ಪಿಕಪ್ಸುಗಳನ್ನು ನಿರ್ಮಿಸುವುದು.

೧೫೧೫. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ೧೯೮೮-೮೯ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನಲ್ಲಿ ಕೋಕನಟ್ ಪಿಕ್‌ಅಪ್ ನಿರ್ಮಾಣ ಮಾಡಲು ಸರ್ಕಾರ ಉದ್ದೇಶಿಸಿದೆಯೇ ?

ಆ) ಇಂತಹ ಉದ್ದೇಶಿತ ತೆಂಗು ಅಣೆಗಳಲ್ಲಿ ಮಾಡದ ಕೆರೆ ಹೋಬಳಿಗೆ ಎಷ್ಟು ಕೋಕನಟ್ ಪಿಕಪ್ ಮಂಜೂರಾತಿ ನೀಡಲು ಸರ್ಕಾರವು ಉದ್ದೇಶಿಸಿದೆ,

ಇ) ಇದುವರೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ನಿರ್ಮಿಸಿರುವ ತೆಂಗು ಅಣೆಗಳು ಎಷ್ಟು ಮತ್ತು ಖರ್ಚಾಗಿರುವ ಹಣವೆಷ್ಟು ?

ಈ) ಹೊಸದುರ್ಗ ತಾಲ್ಲೂಕಿನ ಪ್ರತಿ ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ತೆಂಗುಅಣೆ ನಿರ್ಮಾಣ ಕಾರ್ಯವನ್ನು ಹಮ್ಮಿಕೊಳ್ಳಲು ಸರ್ಕಾರವು ಕ್ರಮ ಕೈಗೊಳ್ಳುವುದೆ ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವರು ತೋಟಗಾರಿಕೆ ಸಚಿವರ ಪರವಾಗಿ).—

ಅ) ಹೌದು,

ಆ) ೩

ಇ) ಅಣೆಗಳು ೧೪.

ಖರ್ಚಾದ ಹಣ ರೂ. ೧೫,೮೭,೯೬೯-೬೯

ಈ) ಭೂ ರಹಿತ ಕೂಲಿ ಕಾರ್ಮಿಕರಿಗೆ ಒದಗಿಸುವ ಕೆಲಸ ಹಾಗೂ ಕಾರ್ಯಕ್ರಮದಂತೆ ಮತ್ತು ಜಲಾನಯನ ಪ್ರದೇಶದಲ್ಲಿ ಇದರ ಅವಶ್ಯಕತೆಯು ಹಾಗೂ ಹಣದ ಅವಕಾಶವನ್ನು ಗಮನದಲ್ಲಿಟ್ಟು ಕೊಂಡು ಹಮ್ಮಿಕೊಳ್ಳುವ ಆಲೋಚನೆ ಇದೆ.

ಶ್ರೀ ಜಿ. ರಾಮದಾಸ್.—ಮಾನ್ಯ ಅಧ್ಯಕ್ಷರೇ, ನಮ್ಮ ಕ್ಷೇತ್ರ ಸಾಮಾನ್ಯವಾಗಿ ಸಾವಿರಾರು ಎಕರೆ ತೆಂಗಿನ ಬೆಳೆಯಿರುವ ಪ್ರದೇಶವಾಗಿದೆ. ಅದಕ್ಕೋಸ್ಕರವಾಗಿ ಅಲ್ಲಿ ಹೆಚ್ಚಿನ ಪಿಕಪ್ಸ್ ಬೇಕಾಗಿದೆ ಇಲ್ಲಿ ವಾಣಿವಿಲಾಸ್ ಅಚ್ಚುಕಟ್ಟು ಇದ್ದು ಕ್ಯಾಚ್‌ಮೆಂಟ್ ಏರಿಯಾ ಇದು ಆಗಿರುವುದರಿಂದ ಹೊಸದಾಗಿ ಕೆರೆಯನ್ನು ಇಲ್ಲಿ ಕಟ್ಟುವುದಕ್ಕೆ ಸರ್ಕಾರಿ ನೀತಿಗನುಗುಣವಾಗಿ ಸಾಧ್ಯವಿಲ್ಲ. ಆದ್ದರಿಂದ ನಮ್ಮಲ್ಲಿ ಹೆಚ್ಚಿನ ಪಿಕಪ್ಸ್‌ಗಳನ್ನು ಮಾಡಬೇಕೆಂದೂ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಅಲ್ಲದೇ ಹೆಚ್ಚು ಹೆಚ್ಚು ಪಿಕಪ್ಸ್‌ಗಳನ್ನು ಕಟ್ಟಬೇಕೆಂದು ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲೂ ಅಡಕವಾಗಿರುತ್ತದೆ. ಆದ್ದರಿಂದ ದಯವಿಟ್ಟು ಹೆಚಿ ನ ಪಿಕಪ್ಸ್ ಕಟ್ಟಿಸಬೇಕೆಂದೂ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ಇದು ಒಳ್ಳೆಯ ಸಲಹೆ. ತೆಂಗಿನ ತೋಟ ಹೆಚ್ಚು ಹೊಂದಿರತಕ್ಕ ಹೊಸದುರ್ಗದಲ್ಲಿ ಕಾಮಗಾರಿ ಕೆಲಸಗಳು ಈಗಾಗಲೇ ನಡೆಯುತ್ತಿವೆ. ಮುಂದೆ ಇಂತಹ ಜಲಾನಯನ ಪ್ರದೇಶಗಳಲ್ಲೂ ಕೂಡಾ ಪಿಕಪ್ ಕಟ್ಟುವ ವ್ಯವಸ್ಥೆ ಮಾಡಲಾಗುವುದು,

ಶ್ರೀ ಜಿ. ರಾಮದಾಸ್.—ನಮ್ಮಲ್ಲಿ ಮಳೆ ಕಡಿಮೆ ಬರುತ್ತದೆ. ನಮ್ಮಲ್ಲಿ ಗುಂಡೇರಿ ಹಳ್ಳ ಎಂದು ಒಂದು ಹಳ್ಳ ಹರಿಯುತ್ತದೆ. ಅಲ್ಲಿ ಕೂಡಾ ಪಿಕಪ್ ಕಟ್ಟುವ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ಈ ಸಲಹೆಯನ್ನು ಸದಸ್ಯರು ಜಿಲ್ಲಾಪರಿಷತ್ತಿನ ಮುಂದೆ ಮಂಡಿಸಬೇಕು. ನಾವೂ ಕೂಡ ಸದಸ್ಯರ ಬೇಡಿಕೆಯನ್ನು ಜಿಲ್ಲಾಪರಿಷತ್ತಿನ ಮುಂದೆ ಕಳುಹಿಸುವುದಕ್ಕೆ ಏರ್ಪಾಡು ಮಾಡುತ್ತೇವೆ,